ಕರ್ನಾಟಕ ಸರ್ಕಾರ

# ಸಂಜೀವಿನಿ-ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ
## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ನಂ.55, ಅಭಯ ಸಂಕೀರ್ಣ, 4ನೇ ಮಹಡಿ, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಕಟ್ಟಡ,
ರಿಸಲ್ದಾರ್ ಬೀದಿ, ಶೇಷಾದ್ರಿಪುರಂ, ಬೆಂಗಳೂರು – 560 020

ಸಂ: ಕೆಎಸ್‌ಆರ್‌ಎಲ್‌ಪಿಎಸ್/ಆರ್‌ಜಿಸಿವೈ/107/2/2013-14 ದಿನಾಂಕ: 06-09-2014

ಇವರಿಗೆ,

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.

ಮಾನ್ಯರೆ,

ವಿಷಯ : ರಾಜೀವ್‌ಗಾಂಧಿ ಚೈತನ್ಯ ಯೋಜನೆಯಡಿ ನೇಮಕಗೊಂಡಿರುವ ಯೋಜನಾ ಅನುಷ್ಠಾನ ಸಂಸ್ಥೆಗಳನ್ನು ತರಬೇತಿ ಕೇಂದ್ರಗಳನ್ನು ಪರಿಶೀಲಿಸಿ ಅಭ್ಯರ್ಥಿಗಳನ್ನು ನಿಯೋಜಿಸುವ ಕುರಿತು.

ಉಲ್ಲೇಖ: ಈ ಕಛೇರಿ ಪತ್ರ ಸಮಸಂಖ್ಯೆ ದಿನಾಂಕ 09-07-2014.

***

ರಾಜೀವ್‌ಗಾಂಧಿ ಚೈತನ್ಯ ಯೋಜನೆಯಡಿ ಉಪಗ್ರಹ ಆಧಾರಿತ ಪ್ರೇರಣಾ ತರಬೇತಿ ಕಾರ್ಯಕ್ರಮದಲ್ಲಿ ಕೌಶಲ್ಯಾಭಿವೃದ್ಧಿ ತರಬೇತಿಯೊಂದಿಗೆ ಉದ್ಯೋಗವನ್ನು ಅಭ್ಯರ್ಥಿಗಳು ಆಯ್ಕೆ ಮಾಡಿಕೊಂಡಿರುವ ಅಭ್ಯರ್ಥಿಗಳಿಗೆ ಯೋಜನಾ ಅನುಷ್ಠಾನ ಸಂಸ್ಥೆಗಳ ಮೂಲಕ ಕೌಶಲ್ಯಾಭಿವೃದ್ಧಿ ತರಬೇತಿಯೊಂದಿಗೆ ಉದ್ಯೋಗ ಕಲ್ಪಿಸಬೇಕಾಗಿದೆ.

ಯೋಜನಾ ಅನುಷ್ಠಾನ ಸಂಸ್ಥೆಗಳ ವಿವರಗಳನ್ನು ಹಾಗೂ ಯೋಜನೆಯ ಅನುಷ್ಠಾನದ ಕುರಿತು ಅನುಸರಿಸಬೇಕಾದ ಕಾರ್ಯವಿಧಾನಗಳನ್ನು ಉಲ್ಲೇಖಿತ (1)ರ ಪತ್ರದೊಂದಿಗೆ ಲಗತ್ತಿಸಿ ಈಗಾಗಲೇ ಕಳುಹಿಸಲಾಗಿದೆ. ಅಭ್ಯರ್ಥಿಗಳನ್ನು ಚಟುವಟಿಕೆವಾರು ವಿಂಗಡಿಸಿ, ತರಬೇತಿ ಕೇಂದ್ರಗಳಿಗೆ ನಿಯೋಜಿಸಬೇಕಾಗಿರುತ್ತದೆ. ಅಭ್ಯರ್ಥಿಗಳನ್ನು ತರಬೇತಿ ಕೇಂದ್ರಗಳಿಗೆ ನಿಯೋಜಿಸುವ ಮುನ್ನಾ ಕೆಳಕಂಡ ಅಂಶಗಳ ಬಗ್ಗೆ ಖಚಿತಪಡಿಸಿ ಕೊಳ್ಳುವುದು.

| | |
|---|---|
| ಅನುಬಂಧ-1 | ತರಬೇತಿ ಸಂಸ್ಥೆಯು ನಿರ್ವಹಿಸಬೇಕಾದ ಅಭ್ಯರ್ಥಿಗಳ ವಿವರದ ನಮೂನೆ |
| ಅನುಬಂಧ-2 | ತರಬೇತಿ ಕೇಂದ್ರದಲ್ಲಿ ಎಲ್ಲಾ ಸೌಕರ್ಯ ಹೊಂದಿರಬೇಕಾದ ಬಗ್ಗೆ ಪರಿಶೀಲನಾ ನಮೂನೆ – ಅನುಬಂಧದಲ್ಲಿನ ಸೌಕರ್ಯಗಳಲ್ಲಿ ಕೊರತೆಯಿದ್ದಲ್ಲಿ ಪೂರ್ಣಗೊಳಿಸುವಂತೆ ಸಂಬಂಧಿಸಿದ ಯೋಜನಾ ಅನುಷ್ಠಾನ ಸಂಸ್ಥೆಗೆ ಸೂಚಿಸುವುದು. |
| ಅನುಬಂಧ-3 | ತರಬೇತಿ ಕೇಂದ್ರವನ್ನು ಅನುಮೋದಿಸುವ ನಮೂನೆ |
| ಅನುಬಂಧ-4 | ವಸತಿ ನಿಲಯದ ಅನುಮೋದನೆಗಾಗಿ ಪಡೆಯಬೇಕಾದ ನಮೂನೆ |
| ಅನುಬಂಧ-5 | ವಸತಿ ನಿಲಯವನ್ನು ಅನುಮೋದಿಸುವ ನಮೂನೆ |
| ಅನುಬಂಧ-6 | ತರಬೇತಿ ಪಠ್ಯಕ್ರಮದ ಮಾಹಿತಿ ನಮೂನೆ |
| ಅನುಬಂಧ-7 | ಬಯೋಮೆಟ್ರಿಕ್ ಯಂತ್ರದ ವಿಶಿಷ್ಟ ವಿವರಣೆಯ ನಮೂನೆ |
| ಅನುಬಂಧ-8 | ಅಭ್ಯರ್ಥಿಗೆ ನೀಡಬೇಕಾದ ಸೌಲಭ್ಯಗಳ ಚೆಕ್‌ಲಿಸ್ಟ್ |

- ತರಬೇತಿ ಸಂಸ್ಥೆಗೆ ಅನುಮೋದನೆ ನೀಡುವ ಮೊದಲು ತರಬೇತಿ ಸಂಸ್ಥೆಯ ಸಾಮರ್ಥ್ಯ ಹಾಗೂ ಲಗತ್ತಿಸಿರುವ ಅನುಬಂಧದಲ್ಲಿನ ಎಲ್ಲಾ ಅಂಶಗಳನ್ನು ತರಬೇತಿ ಸಂಸ್ಥೆ ಹೊಂದಿದೆಯೇ ಎಂದು ಗಮನಿಸುವುದು.
- ಜಿಲ್ಲೆಯಲ್ಲಿ ರಾಜೀವ್‌ಗಾಂಧಿ ಚೈತನ್ಯ ಯೋಜನೆ ಹಾಗೂ ಆಜೀವಿಕಾ-ಸ್ಕಿಲ್ಸ್ ಯೋಜನೆಯಡಿ ಒಂದೇ ವೃತ್ತಿಗೆ ಸಂಬಂಧಿಸಿದ ತರಬೇತಿ ನೀಡುವ ಕೇಂದ್ರಗಳಿದ್ದಲ್ಲಿ, ಸದರಿ ವೃತ್ತಿಗೆ ಆಸಕ್ತಿ ವ್ಯಕ್ತಪಡಿಸಿರುವ ಅಭ್ಯರ್ಥಿಗಳ ಸಂಖ್ಯೆ ಮತ್ತು ತರಬೇತಿ ಕೇಂದ್ರದ ಸಾಮರ್ಥ್ಯಗಳನ್ನು ಗಮನದಲ್ಲಿಟ್ಟುಕೊಂಡು ತರಬೇತಿ ಕೇಂದ್ರಕ್ಕೆ ಅನುಮೋದನೆ ನೀಡಲು ಕ್ರಮ ವಹಿಸುವುದು.
- ರಾಜೀವ್‌ಗಾಂಧಿ ಚೈತನ್ಯ ಯೋಜನೆ ಹಾಗೂ ಆಜೀವಿಕಾ-ಸ್ಕಿಲ್ಸ್ ಯೋಜನೆಯಡಿ ಒಂದೇ ವೃತ್ತಿಗೆ ಸಂಬಂಧಿಸಿದ ತರಬೇತಿ ಕೇಂದ್ರಗಳು ಒಂದೇ ಸ್ಥಳದಲ್ಲಿ ಇದ್ದಲ್ಲಿ, ಅಂತಹ ಸಂದರ್ಭದಲ್ಲಿ ಆಜೀವಿಕಾ-ಸ್ಕಿಲ್ಸ್ ತರಬೇತಿ ಕೇಂದ್ರಕ್ಕೆ ಮೊದಲ ಆದ್ಯತೆ ನೀಡಿ ಅಭ್ಯರ್ಥಿಗಳನ್ನು ನಿಯೋಜಿಸುವುದು.

ತಮ್ಮ ವಿಶ್ವಾಸಿ,

9/9/14.

(ಡಿ.ವಿ. ಸ್ವಾಮಿ)
ಅಭಿಯಾನ ನಿರ್ದೇಶಕರು,
"ಸಂಜೀವಿನಿ"-ಕೆಎಸ್‌ಆರ್‌ಎಲ್‌ಪಿಎಸ್

ಪ್ರತಿಯನ್ನು :

1) ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಯೋಜನಾ ನಿರ್ದೇಶಕರು (ಡಿಆರ್‌ಡಿಎ) ರವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
2) ಮೇಲ್ಕಂಡ ಜಿಲ್ಲಾ ಪಂಚಾಯತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ (ನೋಡಲ್ ಅಧಿಕಾರಿಗಳು) ರವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
3) ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕರು, ಸಂಜೀವಿನಿ, ಕೆಎಸ್‌ಆರ್‌ಎಲ್‌ಪಿಎಸ್, ಗದಗ್. ಕೊಪ್ಪಳ ಮೈಸೂರು, ತುಮಕೂರು ಮತ್ತು ಉತ್ತರ ಕನ್ನಡ.